# ಗೊಗೊಯಿ ಮನದಲ್ಲಿ ಕಹಿ ನೆನಪು

7



2018ರ ಜನವರಿಯಲ್ಲಿ ಸುಪ್ರೀಂ ಕೋರ್ಟ್‌ನ ನಾಲ್ವರು ಅತ್ಯಂತ ಹಿರಿಯ ನ್ಯಾಯಮೂರ್ತಿಗಳು ನಡೆಸಿದ ಮಾಧ್ಯಮಗೋಷ್ಠಿಯನ್ನು ಮುನ್ನೆಲೆಯಲ್ಲಿ ಇರಿಸಿಕೊಂಡೇ ಅತ್ಯುನ್ನತ ನ್ಯಾಯಾಲಯವನ್ನು ಅರ್ಥ ಮಾಡಿಕೊಳ್ಳಬೇಕು ಎಂಬುದು ಈ ವರ್ಷದ ವಿಶೇಷ. 2018ರ ನವೆಂಬರ್ 3ರಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಂಡ ರಂಜನ್ ಗೊಗೊಯಿ ಅವರು 2019ರ ನವೆಂಬರ್ 17ರವರೆಗೆ ಈ ಸ್ಥಾನದಲ್ಲಿದ್ದರು. ಸಾಮಾನ್ಯವಾಗಿ, ಮಹತ್ವದ ಪ್ರಕರಣಗಳ ವಿಚಾರಣೆ ನಡೆಸುವ ಪೀಠಗಳ ಮುಖ್ಯಸ್ಥರಾಗಿ ಮುಖ್ಯ ನ್ಯಾಯಮೂರ್ತಿ ಇರುತ್ತಾರೆ. ಗೊಗೊಯಿ ಅವರು ಅದಕ್ಕೆ ಹೊರತಲ್ಲ. ಶತಮಾನಗಳ ಇತಿಹಾಸ ಇರುವ ಅಯೋಧ್ಯೆಯ ರಾಮಜನ್ಮಭೂಮಿ–ಬಾಬರಿ ಮಸೀದಿ ನಿವೇಶನ ವಿವಾದದಂತಹ ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ವ್ಯಾಪಕ ಪರಿಣಾಮ ಉಂಟು ಮಾಡಿದ್ದ ಅತಿ ನಾಜೂಕು ಪ್ರಕರಣದ ತೀರ್ಪನ್ನು ಅವರ ನೇತೃತ್ವದ ಸಂವಿಧಾನ ಪೀಠ ಕೊಟ್ಟಿದೆ. ಹಾಗಾಗಿಯೇ, ವ್ಯಾಜ್ಯಗಳು, ಕಾನೂನು, ವಿಚಾರಣೆ ಮತ್ತು ತೀರ್ಪಿನ ಆಚೆಯೂ ಸದ್ದು ಮಾಡಿದ ಸುಪ್ರೀಂ ಕೋರ್ಟ್‌ನ ಈ ವರ್ಷವು ಗೊಗೊಯಿ ಅವರ ಸುತ್ತಲೇ ಗಿರಕಿ ಹೊಡೆದಿತ್ತು ಎಂದೂ ಹೇಳಬಹುದು.

ದೀಪಕ್ ಮಿಶ್ರಾ ಅವರು ಮುಖ್ಯ ನ್ಯಾಯಮೂರ್ತಿಯಾಗಿದ್ದಾಗ, 2018ರ ಜನವರಿಯಲ್ಲಿ ಸುಪ್ರೀಂ ಕೋರ್ಟ್‌ನ ನಾಲ್ವರು ಅತ್ಯಂತ ಹಿರಿಯ ನ್ಯಾಯಮೂರ್ತಿಗಳು ಮಾಧ್ಯಮಗೋಷ್ಠಿ ನಡೆಸಿ ಅತ್ಯುನ್ನತ ನ್ಯಾಯಾಲಯದಲ್ಲಿ ಎಲ್ಲವೂ ಸರಿಯಿಲ್ಲ, ಇದನ್ನು ಹೀಗೆಯೇ ಬಿಟ್ಟರೆ ‘ದೇಶದ ಪ್ರಜಾಪ್ರಭುತ್ವವೇ ನಾಶವಾಗಬಹುದು’ ಎಂದು ಎಚ್ಚರಿಸಿದ್ದರು. ಪ್ರಕರಣಗಳನ್ನು ಪೀಠಗಳಿಗೆ ಹಂಚುವಲ್ಲಿ ಸಮಸ್ಯೆ ಇದೆ ಎಂದು ಈ ನ್ಯಾಯಮೂರ್ತಿಗಳು ಹೇಳಿದ್ದರು. ಹೀಗೆ ಮಾಧ್ಯಮಗೋಷ್ಠಿ ನಡೆಸಿದ್ದ ನಾಲ್ವರಲ್ಲಿ ಒಬ್ಬರು ಗೊಗೊಯಿ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಆಗ ಇದ್ದವರು ದೀಪಕ್ ಮಿಶ್ರಾ. ಅವರ ವಿರುದ್ಧದ ಬಂಡಾಯದ ಅಭೂತಪೂರ್ವ ಕ್ರಮವಾಗಿ ಇದು ಇತಿಹಾಸದಲ್ಲಿ ದಾಖಲಾಯಿತು. ನ್ಯಾಯಾಂಗವನ್ನು ತಮಗೆ ಬೇಕಾದಂತೆ ಯಾರೋ ಕುಣಿಸುತ್ತಿದ್ದಾರೆ ಎಂಬ ಅನುಮಾನವನ್ನು ಜನರ ಮನದಲ್ಲಿ ಈ ಘಟನೆ ಬಿತ್ತಿತು.

ಅದೇ ವರ್ಷ ನವೆಂಬರ್‌ನಲ್ಲಿ ಗೊಗೊಯಿ ಮುಖ್ಯ ನ್ಯಾಯಮೂರ್ತಿಯಾದರು. ಅವರ ಮೇಲೆ ಅಪಾರ ನಿರೀಕ್ಷೆಗಳ ಹೊರೆ ಇತ್ತು. ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಪ್ರಜಾಪ್ರಭುತ್ವಕ್ಕೆ ಮಾರಕ ಎಂದು ಎಚ್ಚರಿಸಿದ್ದ ಗೊಗೊಯಿ ಅವರ ಅವಧಿಯಲ್ಲಿ ನ್ಯಾಯಾಂಗವು ಬಹುದೊಡ್ಡ ಸುಧಾರಣೆ ಕಾಣಲಿದೆ ಎಂಬುದು ಸಹಜವಾದ ನಿರೀಕ್ಷೆಯಾಗಿತ್ತು.

ಸುಪ್ರೀಂ ಕೋರ್ಟ್‌ನಲ್ಲಿ ಕಿರಿಯ ಸಹಾಯಕಿಯಾಗಿದ್ದ 35 ವರ್ಷದ ಮಹಿಳೆಯೊಬ್ಬರು 2019ರ ಏಪ್ರಿಲ್ 19ರಂದು ಸುಪ್ರೀಂ ಕೋರ್ಟ್‌ನ ಎಲ್ಲ ನ್ಯಾಯಮೂರ್ತಿಗಳಿಗೆ ಪತ್ರ ಬರೆದು, ಗೊಗೊಯಿ ಅವರು ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿದರು. ಅದರ ಮರುದಿನ, ಗೊಗೊಯಿ ಅವರು ತ್ರಿಸದಸ್ಯ ಪೀಠದಲ್ಲಿ ಈ ಪ್ರಕರಣದ ವಿಶೇಷ ವಿಚಾರಣೆ ನಡೆಸಿದರು. ಆರೋಪಗಳನ್ನು ಅವರು ಅಲ್ಲಗಳೆದರು. ‘ಮಹತ್ವದ ಹಲವು ಪ್ರಕರಣಗಳ ತೀರ್ಪನ್ನು ತಾವು ನೀಡಬೇಕಿದೆ. ಇಂತಹ ಆರೋಪಗಳ ಮೂಲಕ ತಮ್ಮನ್ನು ಬೆದರಿಸಲು ಸಾಧ್ಯವಿಲ್ಲ’ ಎಂದು ಗೊಗೊಯಿ ಹೇಳಿದರು. ಅಂದು, ಪೀಠವು ಯಾವುದೇ ಆದೇಶ ನೀಡಲಿಲ್ಲ. ಬಳಿಕ, ಬೇರೊಂದು ಪೀಠವು ವಿಚಾರಣೆ ಮುಂದುವರಿಸಿತು. ‘ಇದು ನ್ಯಾಯಾಂಗದ ಮೇಲೆ ನಡೆದ ದಾಳಿ, ನ್ಯಾಯಾಂಗದ ಸ್ವಾತಂತ್ರ್ಯವನ್ನು ದಮನ ಮಾಡುವ ಷಡ್ಯಂತ್ರ’ ಎಂದು ಆರೋಪಿಸಿ ವಕೀಲ ಉತ್ಸವ್ ಬೈನ್ಸ್ ಎಂಬುವರು ಸುಪ್ರೀಂ ಕೋರ್ಟ್‌ಗೆ ದೂರನ್ನೂ ನೀಡಿದರು. ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಆಯೋಗವು ತನಿಖೆಯನ್ನೂ ನಡೆಸಿ ಗೊಗೊಯಿ ಅವರನ್ನು ಆರೋಪಮುಕ್ತಗೊಳಿಸಿತು.

ಗೊಗೊಯಿ ಅವರ ಅವಧಿಯಲ್ಲಿಯೂ ಪ್ರಕರಣಗಳನ್ನು ಪೀಠಗಳಿಗೆ ಹಂಚಿಕೆ ಮಾಡುವ ವಿಚಾರದಲ್ಲಿ ಬದಲಾವಣೆ ಆದಂತೆ ಕಾಣಿಸಲಿಲ್ಲ.

ನಿವೃತ್ತಿಯ ದಿನ ಮುಖ್ಯ ನ್ಯಾಯಮೂರ್ತಿ ಮಾಧ್ಯಮಗೋಷ್ಠಿ ನಡೆಸುವುದು ನಡೆದುಕೊಂಡು ಬಂದ ಕ್ರಮ. ಗೊಗೊಯಿ ಅವರು ಅದನ್ನೂ ಮುರಿದರು. ಮಾಧ್ಯಮಪ್ರತಿನಿಧಿಗಳನ್ನು ಭೇಟಿಯಾಗುವ ಬದಲು ಅವರಿಗೆ ಮೂರು ಪುಟಗಳ ಟಿಪ್ಪಣಿಯನ್ನು ಕಳುಹಿಸಿಕೊಡಲಾಯಿತು. ‘ಕಹಿ ಸತ್ಯಗಳು ಮನದಲ್ಲಿಯೇ ಇರಬೇಕು’ ಎಂಬ ಒಂದು ವಾಕ್ಯವೂ ಆ ಟಿಪ್ಪಣಿಯಲ್ಲಿ ಇತ್ತು.

ಈ ಪ್ರಕರಣಗಳನ್ನು ಬಿಡಿಬಿಡಿಯಾಗಿ ಮತ್ತು ಜತೆಯಾಗಿ ಇರಿಸಿ ನೋಡುವಾಗ ‘ಅರ್ಥಗರ್ಭಿತ’ವಾದ ಅರ್ಥಗಳು ಹೊಳೆದರೆ ಅದು ಯಾರ ತಪ್ಪೂ ಅಲ್ಲ.

ಅಯೋಧ್ಯೆ ನಿವೇಶನ ವಿವಾದ ಇತ್ಯರ್ಥವಾಗಿದೆ. ಶಬರಿಮಲೆಯ ಅಯ್ಯಪ್ಪ ಸ್ವಾಮಿ ದೇವಾಲಯಕ್ಕೆ ಎಲ್ಲ ವಯಸ್ಸಿನ ಮಹಿಳೆಯರಿಗೆ ಪ್ರವೇಶಕ್ಕೆ ಅವಕಾಶ ನೀಡಿದ್ದ ತೀರ್ಪನ್ನು ಏಳು ನ್ಯಾಯಮೂರ್ತಿಗಳ ವಿಸ್ತೃತ ಪೀಠಕ್ಕೆ ನೀಡಲಾಗಿದೆ. ರಫೇಲ್ ಯುದ್ಧ ವಿಮಾನ ಖರೀದಿಯಲ್ಲಿ ಅವ್ಯವಹಾರ ಆಗಿದೆ ಎಂಬ ಆರೋಪಗಳ ಬಗ್ಗೆ ತನಿಖೆ ಅಗತ್ಯ ಇಲ್ಲ ಎಂಬ ಆದೇಶ ಬಂದಿದೆ. ಕರ್ನಾಟಕದ ಶಾಸಕರ ಅನರ್ಹತೆಯನ್ನು ಎತ್ತಿ ಹಿಡಿದು, ಅವರ ಪುನರಾಯ್ಕೆಗೆ ಅವಕಾಶ ಕೊಡಲಾಗಿದೆ. ರಾಜಕೀಯ, ಸಾಮಾಜಿಕ, ಧಾರ್ಮಿಕವಾಗಿ ವ್ಯಾಪಕ ಪರಿಣಾಮ ಬೀರಬಲ್ಲ ತೀರ್ಪುಗಳು ಪ್ರಕಟವಾಗಿವೆ.

ಇಲ್ಲಿ ಪ್ರಸ್ತಾಪಿಸಲಾದ ವ್ಯಾಜ್ಯ, ಕಾನೂನು ಮತ್ತು ತೀರ್ಪಿನ ಆಚೆಗಿನ ವಿಚಾರಗಳು ಮಹತ್ವದ ಪ್ರಕರಣಗಳ ವಿಚಾರಣೆಯ ಮೇಲೆ ಪ್ರತ್ಯಕ್ಷ ಅಲ್ಲದಿದ್ದರೂ ಪರೋಕ್ಷ ಪ್ರಭಾವ ಬೀರಿರಬಹುದೇ? ಪ್ರಶ್ನೆ ಅನಪೇಕ್ಷಿತ ಅಲ್ಲ.